**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,**
**ಮಂಡ್ಯ.**

**ಎಸ್. ಸಿ. ನಂ.78/2019**

ಪ್ರಾ.ಸಾ. 6

ಚಾ.ಸಾ. 10

**ಪ್ರಮಾಣವಚನ ಬೋಧಿಸಿದ ದಿನಾಂಕ 08.07.2024**

ಸಾಕ್ಷಿದಾರರ ಹೆಸರುಃ ರಾಚಯ್ಯ

ತಂದೆಯ ಹೆಸರುಃ ಕುಳ್ಳೇಗೌಡ

ವಯಸ್ಸುಃ 59 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಕೆಂಚನದೊಡ್ಡಿ ಗ್ರಾಮ

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.2 ನನ್ನ ಸಂಬಂಧಿಕರು. ಚಾಸಾ.1 ವರಸೆಯಲ್ಲಿ ನನ್ನ ಮಗಳು ಆಗಬೇಕು. ಚಾಸಾ.2 ಮತ್ತು 3 ರವರಿಗೆ ಮೂರು ಜನ ಮಕ್ಕಳು ಚಾಸಾ.1 ಅವರಿಗೆ ಮೂರನೇಯ ಮಗಳು. 2009 ರಲ್ಲಿ 1 ನೇ ಆರೋಪಿಯೊಂದಿಗೆ ಮದುವೆ ನಿರ್ವಯ ಆಗಿತ್ತು. ಮದುವೆ ಮಾತುಕತೆಗೆ ನಾನು, ಚಾಸಾ.2, 3, ಮರಸಿದ್ದೇಗೌಡ ಹುಡುಗಿ ಕಡೆಯಿಂದ ಹೋಗಿದ್ದು, ಹುಡುಗನ ಕಡೆಯಿಂದ ನಾಗಲಿಂನಗೇಗೌಡ, ಮರಿಸ್ವಾಮಿ ಇತರರು ಮರಿಸಿದ್ದೇಗೌಡರವರ ಮನೆಯಲ್ಲಿ ಸೇರಿದ್ದೆವು. ಹುಡುಗನಿಗೆ ವರದಕ್ಷಿಣೆಯಾಗಿ ಕತ್ತಿನ ಚೈನು, 10 ಗ್ರಾಮ ಉಂಗುರ, ರೂ.50,000/- ಹಣ ಬೈಕು ಖರೀದಿ ಮಾಡಲು ಕೊಡಬೇಕು, ಹುಡುಗಿಗೆ 50 ಗ್ರಾಮ ಮಾಂಗಲ್ಯ ಸರ, 25 ಗ್ರಾಂನ ಎರಡು ಬಳೆಗಳು, ನೆಕ್ಲೇಸ್, ಓಲೆ ಜುಮುಕಿ ಕೊಟ್ಟು ಕೆ.ಎಂ. ದೊಡ್ಡಿಯ ಬಾಲಾಜೀ ಸಮುದಾಯ ಭವನದಲ್ಲಿ ಮದುವೆ ಮಾಡಿಕೊಡಲು ನಿಶ್ಚಯವಾಗಿತ್ತು. ಇದರಂತೆ ಚಾಸಾ.2 ಹಾಗೂ 3 ರವರು ಆರೋಪಿತರಿಗೆ ಚಿನ್ನ ಹಾಗೂ ವರದಕ್ಷಿಣೆ ಹಣವನ್ನು ಕೊಟ್ಟು ಸಮುದಾಯ ಭವನದಲ್ಲಿ ಮದುವೆ ಮಾಡಿಕೊಡಲಾಯಿತು. ಮದುವೆಯಾದ ನಂತರ ಕಾಗೇಪುರ ಗ್ರಾಮದಲ್ಲಿ ಗಂಡನ ಮನೆಯಲ್ಲಿ ಚಾಸಾ.1 ವಾಸ ಇದ್ದಳು. ಸದರಿ ಗ್ರಾಮದಲ್ಲಿ 1 ನೇ ಆರೋಪಿ ದಿನಸಿ

ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡಿಕೊಂಡಿದ್ದನು. ಗಂಡ ಹೆಂಡತಿ ಇಬ್ಬರು ಒಂದೆರಡು ವರ್ಷಗಳ ಕಾಲ ಚೆನ್ನಾಗಿದ್ದರು. ಅವರಿಗೆ ಒಂದು ಗಂಡು ಮಗ ಜನಿಸಿತ್ತು.

2. ನಂತರದ ದಿನಗಳಲ್ಲಿ 1 ನೇ ಆರೋಪಿ ಕಿರಿಕಿರಿ ಮಾಡುತ್ತಿದ್ದನು. ಅಂಗಡಿಯಲ್ಲಿ ನಷ್ಟ ಆಗಿದೆ ತವರು ಮನೆಯಿಂದ ಹಣ ತೆಗೆದುಕೊಂಡು ಬಾ ಎಂದು ಚಾಸಾ.1 ರವರಿಗೆ ಕಿರುಕುಳ ನೀಡುತ್ತಿದ್ದರು. ಚಾಸಾ.1 ಅವಳ ತಂದೆ ತಾಯಿಗೆ ವಿಷಯ ಹೇಳಿದಾಗ ಅವರು ಆರೋಪಿತರಿಗೆ ಬುದ್ಧಿ ಹೇಳಿದ್ದರು. 1 ನೇ ಆರೋಪಿ ಚಾಸಾ.2 ಹಾಗೂ 3 ರವರ ಮನೆಗೆ ಬಂದು ಚಾಸಾ.1 ರವರನ್ನು ಕಳುಹಿಸಿಕೊಡಿ ನಾನು ಇನ್ನು ಮುಂದೆ ಚೆನ್ನಾಗಿ ನೋಡಿಕೊಳ್ಳುತ್ತೇನೆಂದು ಹೇಳಿದನು. ಮರುದಿವಸ ನಾವೇ ಕರೆದುಕೊಂಡು ಬರುತ್ತೇವೆಂದು ಚಾಸಾ.2 ಹಾಗೂ 3 ರವರ ಹೇಳಿದರು.

3. ಮರುದಿವಸ ಕರೆದುಕೊಂಡು ಹೋದಾಗ ಇಬ್ಬರು ಆರೋಪಿತರು ಚಾಸಾ.1 ರವರಿಗೆ ಹೊಡೆದು ಬಡಿದು ದುಡ್ಡು ತರದೇ ಹಾಗೇ ಬಂದಿದ್ದೀಯಾ ಎಂದು ಸೀಮೆಎಣ್ಣೆ ಮೈ ಮೇಲೆ ಸುರಿದು ಬೆಂಕಿ ಹಚ್ಚುವ ಪ್ರಯತ್ನ ಮಾಡಿದ್ದರು ಎಂದು ಚಾಸಾ.2 ನನಗೆ ಹೇಳಿದ್ದರು, ಈ ಸಂಬಂಧ ಆಕೆಯನ್ನು ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಸೇರಿಸಿ ಪೊಲೀಸರಿಗೆ ದೂರು ಕೊಟ್ಟಿರುವ ವಿಷಯ ಚಾಸಾ.2 ನನಗೆ ಹೇಳಿದ್ದರು. ನಾನು ಚಾಸಾ.1 ರವರನ್ನು ನೋಡಲು ಆಸ್ಪತ್ರೆಗೆ ಹೋಗಿದ್ದೆ.

4. ನಿಪಿ.4 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.4 ಬಿ ಎಂದು ಗುರುತಿಸಲಾಯಿತು. ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ಹಾಗೂ ಚಾಸಾ.17 ಇವರನ್ನು ಸಿಪಿಐ ಕಛೇರಿಗೆ ಕರೆದುಕೊಂಡು ಹೋಗಿ ಸದರಿ ಪ್ರಕರಣದ ಬಗ್ಗೆ ಮಾಹಿತಿ ನೀಡಿ ನಿಪಿ.4 ಕ್ಕೆ ನನ್ನ ಸಹಿ ಪಡೆದುಕೊಂಡಿದ್ದು ಆ ಸಮಯದಲ್ಲಿ ಚಾಸಾ.1 ಏನನ್ನೂ ಪೊಲೀಸರಿಗೆ ಹಾಜರುಪಡಿಸಿರಲಿಲ್ಲ. ಈ ಕುರಿತು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿ ಹಾಜರಿದ್ದು 2 ನೇ ಆರೋಪಿ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ

5. ದಿನಾಂಕ 17.12.2016 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ.17 ಇವರನ್ನು ಸಿಪಿಐ ಕಛೇರಿಗೆ ಕರೆಯಿಸಿ ಚಾಸಾ.1 ರವರು ನಿಪಿ.5 ಲಗ್ನಪತ್ರಿಕೆ ಹಾಗೂ ನಿಪಿ.6 ಪೋಟೋಗಳನ್ನು ಹಾಜರುಪಡಿಸಿದಾಗ

ಪೊಲೀಸರು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡು ನಿಪಿ.4 ರಂತೆ ಮಧ್ಯಾಹ್ನ 12.15 ರಿಂದ 1.00 ಗಂಟೆವರೆಗೆ ಮಾಡಿ ಬರೆದು ಓದಿ ಹೇಳಿದಾಗ ಸರಿ ಇದೆ ಎಂದು ಸಹಿ ಮಾಡಿದ್ದೇನೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

1. ಚಾಸಾ.1 ರಿಂದ 3 ನನ್ನ ಸಂಬಂಧಿಕರು ನಾವು ಒಂದೇ ಊರಿನವರು. ಇಂದು ನ್ಯಾಯಾಲಯಕ್ಕೆ ಚಾಸಾ.3 ನನ್ನೊಂದಿಗೆ ಬಂದಿದ್ದಾರೆಂದರೆ ಸರಿ. ಊರಿನಿಂದ ಅವರೇ ನನ್ನನ್ನು ಕರೆ ತಂದಿರುತ್ತಾರೆಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಮದುವೆ ಮಾತುಕತೆ ನಡೆದಿರಲಿಲ್ಲ. ಸಾಮಾನ್ಯವಾಗಿ ಮದುವೆ ಮಾತುಕತೆ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ ಎಂದರೆ ಗೊತ್ತಿಲ್ಲ. ಮದುವೆ ಮಾತುಕತೆಯಲ್ಲಿ ನಿರ್ಧರಿಸಿದ ಹಾಗೇ ಒಡವೆಯನ್ನು ಚಾಸಾ.2 ಆರೋಪಿತರಿಗೆ ಕೊಡುವಾಗ ನಾನು ಹಾಜರು ಇರಲಿಲ್ಲ, ಚಾಸಾ.2 ಹೇಳಿದ್ದರು, ಒಡವೆಗಳನ್ನು ಎಲ್ಲಿ ಮಾಡಿಸಿದ್ದರು ಎಂದು ನನಗೆ ಗೊತ್ತಿಲ್ಲ.

2. ಕೆ.ಎಂ.ದೊಡ್ಡಿಗೆ ಹತ್ತಿರವಾಗಿರುವ ಊರು ಆರೋಪಿತರ ನೆಲಮಾಕನಹಳ್ಳಿ ಎಂದರೆ ಸರಿ. ಚಾಸಾ.2 ಹಾಗೂ 3 ಕುಟುಂಬ ಆರೋಪಿತರಿಗೆ ಹೋಲಿಸಿದರೆ ಅನುಕೂಲವಾಗಿಲ್ಲ ಎಂದರೆ ಸರಿಯಲ್ಲ. ಮದುವೆಯಾಗಿ ಎರಡು ವರ್ಷ ಆದ ಮೇಲೆ ಚಾಸಾ.1 ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂಬ ಬಗ್ಗೆ ಚಾಸಾ.1 ಆಗಲೀ, ಅವರ ತಂದೆ ತಾಯಿಯಾಗಲೀ ಮೊದಲು ಯಾವುದೇ ದೂರು ಕೊಟ್ಟಿರಲಿಲ್ಲ. ಮದುವೆಯಾದ ನಂತರ ನಾನು ನೆಲಮಾಕನಹಳ್ಳಿ ಗ್ರಾಮಕ್ಕೆ ಹೋಗಿದ್ದೇನೆ. ಚಾಸಾ.1 ಆರೋಪಿತರ ಹಾಗೂ ಆರೋಪಿಯ ತಂಗಿಯ ವಿರುದ್ಧ ಭಾಗಾಂಶಕ್ಕೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹಾಕಿದ್ದಳು ಎಂದರೆ ಸರಿ. 1 ನೇ ಆರೋಪಿ ವಿರುದ್ಧ ಜೀವನಾಂಶ ಕೇಳಿ ಕೇಸು ಹಾಕಿರುವ ವಿಷಯ ಗೊತ್ತು ಎಂದರೆ ಸರಿ. ಎರಡು ಪ್ರಕರಣಗಳು ಈಗಲೂ ಜಾಲ್ತಿಯಲ್ಲಿವೆ.

3. ಆರೋಪಿತರು ಚಾಸಾ.1 ರವರ ತಂದೆ ತಾಯಿ ಹತ್ತಿರ ವರದಕ್ಷಿಣೆ ಮಾತುಕತೆ ನಡೆದಿರಲಿಲ್ಲ ಹಾಗೂ ವರದಕ್ಷಿಣೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರು ಆರೋಪಿತರಿಗಿಂತ ಅನುಕೂಲವಾಗಿರಲಿಲ್ಲ ಹೀಗಾಗಿ ಆರೋಪಿತರೇ ಮದುವೆ ಖರ್ಚು ವಹಿಸಿಕೊಂಡಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿಗೆ ವ್ಯಾಪಾರ ಚೆನ್ನಾಗಿ ಆಗುತ್ತಿತ್ತು ಮಗು ಹುಟ್ಟಿದ ಮೇಲೆ ಮಳವಳ್ಳಿಯಲ್ಲಿಯೇ ವಾಸ ಮಾಡೋಣ ಎಂದು ಚಾಸಾ.1 ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ ವಯಸ್ಸಾದ ತಂದೆ ತಾಯಿಯನ್ನು ನೋಡಿಕೊಳ್ಳಬೇಕು ಎಂದು ಅವಳ ಮಾತಿಗೆ ಮನ್ನಣೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಬೇಡಿಕೆಗಳನ್ನು 1 ನೇ ಆರೋಪಿ ನಿರಾಕರಿಸಿದ್ದರಿಂದ ಚಾಸಾ.1 ರವರು ಆರೋಪಿತರ ಇಚ್ಛೆಗೆ ವಿರುದ್ಧವಾಗಿ ತಾನಾಗಿಯೇ ಬಂದು ತಂದೆ ಮನೆಯಲ್ಲಿದ್ದಳು ಎಂದರೆ ಸರಿಯಲ್ಲ. ತಂದೆ ಮನೆಗೆ ಹೋದ ಮೇಲೆ ಚಾಸಾ.1 ವಿಭಾಗ ಕೋರಿ ದಾವೆ ಹಾಕಿದ್ದಳು ಹಾಗೂ ಜೀವನಾಂಶ ಕೇಸು ಹಾಕಿದ್ದಳು ಎಂದರೆ ದಾವೆ ಹಾಕಿರುವುದು ನಿಜ. ಆರೋಪಿತರು

ಯಾವತ್ತೂ ಚಾಸಾ.1 ರವರಿಗೆ ವರದಕ್ಷಿಣೆ ಕಿರುಕುಳ ಕೊಟ್ಟಿರಲಿಲ್ಲ, ಆದ್ದರಿಂದ ಚಾಸಾ.1 ನನಗೆ ಹೇಳುವ ಪ್ರಮೇಯ ಬಂದಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ.1 ರವರ ಮನೆಗೆ ಹೋಗಿ ಆಕೆಯನ್ನು ಕರೆದಿರಲಿಲ್ಲ ಏಕೆಂದರೆ ಅಷ್ಟರಲ್ಲಿ ಆಗಲೇ ಆಕೆ ದಾವೆಗಳನ್ನು ಹಾಕಿದ್ದಳು ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಷಯ ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ.1 ರವರಿಗೆ ದೈಹಿಕವಾಗಿ ಹಲ್ಲೆ ಮಾಡಿರಲಿಲ್ಲ, ಬೆಂಕಿ ಹಚ್ಚಿ ಸುಡುವ ಪ್ರಯತ್ನ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಆರೋಪಿತರು ಹೊಡೆದಿರಲ್ಲಿ ಹೀಗಾಗಿ ನಾನು ಚಾಸಾ.1 ರವರನ್ನು ಆಸ್ಪತ್ರೆಯಲ್ಲಿ ನೋಡಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

4. ಮಹಜರಿಗೆ ಬರಲು ನನಗೆ ಪೊಲೀಸರು ಯಾವುದೇ ನೋಟಿಸು ಕೊಟ್ಟಿರಲಿಲ್ಲ, ಪೊಲೀಸರು ಸೃಷ್ಟಿಸಿರುವ ದಾಖಲೆಗೆ ನಾನು ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ಆರೋಪಿತರ ಯಾವುದೇ ತಪ್ಪು ಇಲ್ಲದೇ ಇದ್ದರೂ ಕೂಡ ಚಾಸಾ.1 ರಿಂದ 3 ರವರ ಮಾತುಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)
C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.